

ಚಿತ್ರ: ತಾಜುದ್ದೀನ್ ಆಜಾದ್

# ಸ್ಪರ್ಧಾತ್ಮಕ ಪರೀಕ್ಷೆಗಳೂ.. ತರಬೇತಿ ಕೇಂದ್ರಗಳೂ..

ಮಕ್ಕಳನ್ನು ಓದುವ ಯಂತ್ರಗಳನ್ನಾಗಿ ಮಾಡುವ, ತರಬೇತಿ ಕೇಂದ್ರಗಳು ಇರಬೇಕೇ?

★ ಲಾವಣ್ಯಗೌರಿ ವೆಂಕಟೇಶ್

ಹತ್ತನೆಯ ತರಗತಿಯ ನಂತರ ಮುಂದೇನು? ಈ ಪ್ರಶ್ನೆಗೆ ಉತ್ತರ ಹಾಗೂ ಇದರ ಬಗ್ಗೆ ಮಾಹಿತಿಗಳು ಪತ್ರಿಕೆಗಳಲ್ಲಿ, ರೇಡಿಯೋದಲ್ಲಿ ಹಾಗೂ ಟಿವಿ ಚಾನೆಲ್‌ಗಳಲ್ಲಿ ಸಿಗುತ್ತಲೇ ಇರುತ್ತವೆ. ವಿಷಯ ಯಾವುದಾದರೂ ಸಾಮಾನ್ಯವಾಗಿ ವೈವಿಧ್ಯ ಕಡಿಮೆ ಇದ್ದಾಗ ಆಯ್ಕೆ ಸುಲಭ. ವೈವಿಧ್ಯ ಹೆಚ್ಚಾದಷ್ಟೂ ಆಯ್ಕೆ ಕಠಿಣವಾಗುತ್ತಾ ಹೋಗುತ್ತದೆ. ಕೆಲವು ವರ್ಷಗಳಿಂದೀಚೆಗೆ ಶುರುವಾಗಿರುವ ಈ ವೃತ್ತಿಪರ ಶಿಕ್ಷಣ ತರಬೇತಿ ಕೇಂದ್ರಗಳಿಂದಾಗಿ ಗೊಂದಲ ಅಧಿಕವಾಗಿದೆ.

ಹಿಂದೆಲ್ಲಾ ಶಾಲೆಯಿಂದ ಪಾಸಾಗಿ ಹೋದ 'ಸೀನಿಯರ್' ವಿದ್ಯಾರ್ಥಿಗಳಿಂದ ವಿಷಯಗಳನ್ನು ಸಂಗ್ರಹಿಸಬೇಕಿತ್ತು. ಮೇಲಾಗಿ ಆಯ್ಕೆ ವಿದ್ಯಾರ್ಥಿಗಳ ಕೈಯಲ್ಲಿತ್ತು! ಈಗ ಹಾಗಲ್ಲ, ಮಕ್ಕಳು ಹುಟ್ಟಿದಾಗಲೇ ಪೋಷಕರು ತಮ್ಮ ಮಗು ಏನಾಗಬೇಕೆಂದು ನಿರ್ಧರಿಸಿಬಿಟ್ಟಿರುತ್ತಾರೆ! ಮಕ್ಕಳ ಇಷ್ಟಾನಿಷ್ಟದ ಬಗ್ಗೆ ಯೋಚಿಸದೆ, ಅವರನ್ನೂ ಶ್ರಮ ಪಡುವಂತೆ ಮಾಡುತ್ತಾರೆ. ಇದಕ್ಕೆ ಕಾರಣ ಅಗತ್ಯಕ್ಕಿಂತ ಹೆಚ್ಚಾಗಿ ಅಲ್ಲಲ್ಲಿ ಹುಟ್ಟಿಕೊಂಡಿರುವ ತರಬೇತಿ ಕೇಂದ್ರಗಳು ಅಥವಾ ಕೋಚಿಂಗ್ ಕ್ಲಾಸ್‌ಗಳು!

ಒಂದು ಕಾಲವಿತ್ತು. ಮಕ್ಕಳಿಗೆ ಯಾವ ವಿಷಯ ಕಷ್ಟ ಎಂದೆನಿಸುತ್ತಿತ್ತೋ, ಆ ವಿಷಯಕ್ಕೆ ಮಾತ್ರ ಮನೆಪಾಠ ಮಾಡುವ ಶಿಕ್ಷಕರ ಬಳಿ ಹೋಗಿ ಪಾಠ ಕಲಿಯುತ್ತಿದ್ದೆವು. ಆದರೆ ಈಗ ಹಾಗಲ್ಲ. ಮಕ್ಕಳಿಗೆ ಕಷ್ಟವೋ ಇಷ್ಟವೋ ಎಂದು ತಿಳಿಯುವ ಗೋಜಿಗೇ ಹೋಗುವುದಿಲ್ಲ. ಬಣ್ಣ ಬಣ್ಣದ ಕನಸುಗಳನ್ನು ತೋರಿಸುವ ತರಬೇತಿ ಕೇಂದ್ರಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಾದರೂ ಮಕ್ಕಳನ್ನು ಸೇರಿಸುತ್ತಾರೆ. ಇಲ್ಲಿ ಮಕ್ಕಳ ಇಷ್ಟಕ್ಕಿಂತ ಹೆಚ್ಚಾಗಿ ಪೋಷಕರ 'ಪ್ರೆಸ್ಟೀಜ್' ಮುಖ್ಯವಾಗಿರುತ್ತದೆ. ಈ ಕೋಚಿಂಗ್ ಕ್ಲಾಸ್‌ಗಳು ಒಂದಕ್ಕೊಂದು ಪೈಪೋಟಿ ನಡೆಸಿಕೊಳ್ಳುತ್ತಾ, ಪೋಷಕರನ್ನು ಹಾಗೂ ಮಕ್ಕಳನ್ನು ತಮ್ಮತ್ತ ಸೆಳೆಯುವಲ್ಲಿ ಯಶಸ್ವಿಯಾಗಿವೆ.

ಈಗ ತಮ್ಮಿಷ್ಟದ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ಮಕ್ಕಳು ಹತ್ತನೇ ತರಗತಿಯವರೆಗೂ ಕಾಯಬೇಕಾಗಿಲ್ಲ. ಕಾರಣ ಈ ಕೋಚಿಂಗ್ ಕ್ಲಾಸ್‌ಗಳು ಶುರುವಾಗುವುದೇ 8ನೇ ತರಗತಿಯಿಂದ! ಇನ್ನೂ ಕೆಲವು ತರಬೇತಿ ಕೇಂದ್ರಗಳು ಬೇಸಿಗೆ ಶಿಬಿರ ಎನ್ನುವ ಹೆಸರಿನಲ್ಲಿ 6ನೇ ತರಗತಿಯಿಂದಲೇ ತರಬೇತಿಯನ್ನು ಶುರು ಮಾಡಿವೆ!

ಇಲ್ಲಿ ಪೋಷಕರ ಪಾತ್ರ ಬಹಳ ಮುಖ್ಯ. ತಮ್ಮ ಮಕ್ಕಳು ಯಾವ